ಕಥೆ

# ಎಲ್ಲ ನಂಟನು ತೊರೆದು




## ಪಿ.ಬಿ. ಪ್ರಸನ್ನ

ಕಲೆ: ಆದಿತ್ಯ ಸದಾಶಿವ್


'ಗೋವಿಂದ್ ರಾವ್ ಪೇಷೆಂಟ್ ಪಾರ್ಟಿ ಕೂಡಲೇ ಐಸಿಯುನ ಹತ್ತಿರ ಬನ್ನಿ' ಮೈಕಿನಲ್ಲಿ ಧ್ವನಿ ಕೇಳಿದ ಕೂಡಲೆ ವಿವೇಕ ಧಿಗ್ಗನೆ ಎದ್ದ. ಸೀದ ಐಸಿಯೂನ ಹತ್ತಿರ ಹೋದ. ಸೆಕ್ಯುರಿಟಿಯವ ಒಮ್ಮೆ ಅಡಿಯಿಂದ ಮುಡಿಯವರೆಗೆ ಇವನನ್ನು ನೋಡಿದ. 'ಇಲ್ಲಿಯೇ ನಿಂತುಕೊಳ್ಳಿ. ಡಾಕ್ಟರ್ ಒಳಗೆ ಹೋಗಿದ್ದಾರೆ. ಬಂದ ನಂತ್ರ ನಿಮ್ಮ ಹತ್ರ ಮಾತಾಡ್ತಾರೆ' ಅಂದ. ಅಲ್ಲಿ ಅಷ್ಟುಹೊತ್ತಿಗಾಗಲೇ ಕ್ಯೂನಲ್ಲಿ ಒಂದಷ್ಟು ಜನ ಐಸಿಯು ಒಳಗಿದ್ದ ಪೇಷೆಂಟುಗಳ ಸಂಬಂಧಿಕರು ನಿಂತಿದ್ದರು. ವಿವೇಕನೂ ನಿಂತ. ಒಂದಷ್ಟು ಹೊತ್ತಾದ ನಂತರ ಮುಖ್ಯ ಡಾಕ್ಟರ್ ಹೊರಗೆ ಬಂದರು. ಅವರ ಜೊತೆ ಪಿಜಿ ಡಾಕ್ಟರ್‌ಗಳು ಇದ್ದರು. ಒಬ್ಬೊಬ್ಬರನ್ನೇ ಕೌನ್ಸಿಲಿಂಗ್ ರೂಮಿಗೆ ಕರ್ದು ಪೇಷೆಂಟ್‌ನ ಕಂಡೀಷನ್ ವಿವರಿಸಿ ಕಳಿಸುತ್ತಿದ್ದರು. ಕೊನೆಯಲ್ಲಿ ವಿವೇಕ ಇದ್ದ. ಅವನು ಕೌನ್ಸಿಲಿಂಗ್ ರೂಮಿನೊಳಗೆ ಹೋದಕೂಡಲೆ ಪಿಜಿ ಡಾಕ್ಟರುಗಳು ಮುಖ್ಯ ಡಾಕ್ಟರರ ಕಿವಿಯಲ್ಲಿ ಪಿಸಿಪಿಸಿ ಅಂದರು. ಅವರ ಮುಖ ಕೆಂಪಾಯಿತು. ಹುಬ್ಬುಗಂಟಿಕ್ಕಿದರು.

'ನೀವೆಯಾ ನಿನ್ನೆ ನರ್ಸ್‌ಗಳ ಹತ್ತಿರ ಉಲ್ಟಾ ಮಾತಾಡಿದವರು!?' ಸ್ವಲ್ಪ ಕಠೋರವಾಗಿಯೇ ಕೇಳಿದರು.

'ಏ... ಏ... ಏನಾಯಿತು ಡಾಕ್ಟರ್?' ಗಾಬರಿಯಿಂದ ಕೇಳಿದ.

'ಎಂತದಾಯ್ತಾ? ಅಲ್ಲ ಮಾರ್ರೆ... ನಿಮಿಗೆ ಐಸಿಯು ಅಂದ್ರೆ ಅಷ್ಟು ಸಸಾರವಾ? ಒಳಗೆ ಇರುವ ಪೇಷೆಂಟಿಗೆ ಎಂಥದು ಸಾ ಇನ್ಫೆಕ್ಷನ್ ಆಗಬಾರದು ಅಂತ ನಾವು ಟ್ರೈ ಮಾಡ್ತಾ ಇದ್ರೆ ನೀವು ನಿನ್ನೆ ಸಂಜೆ ವಿಸಿಟಿಂಗ್ ಅವರ್ಸ್‌ನಲ್ಲಿ ನಮ್ಮ ನರ್ಸ್‌ಗಳ ಕಣ್ಣು ತಪ್ಪಿಸಿ ಬೀಡಾ ಕೊಡ್ಲಿಕ್ಕೆ ನೋಡಿದ್ರಂತೆ ಗೋವಿಂದ ರಾಯರಿಗೆ? ನರ್ಸ್‌ಗಳು ನೋಡಿ ಬೇಡ ಕೊಡ್ಬೇಡಿ ಹಾಗೆಲ್ಲ ಕೊಡುವ ಹಾಗಿಲ್ಲ ಅಂತ ಹೇಳಿದ್ದಕ್ಕೆ ಪೆದಂಬು ಮಾತಾಡಿದ್ರಂತೆ. ಕೊನೆಗೆ ಐಸಿಯು ಇನ್‌ಚಾರ್ಜ್ ಡಾಕ್ಟ್ರು ಬಂದು ಹೇಳಿದ ಮೇಲೆ ಒಪ್ಪಿಕೊಂಡಿರಂತೆ. ಎಂತಕ್ಕೆ ಹೀಗೆಲ್ಲ ಮಾಡಿದ್ರಿ? ಸರಿಯಾ ನೀವು ಮಾಡಿದ್ದು?'

'ಇ... ಇ... ಇಲ್ಲ ಡಾಕ್ಟರ್ ಅದು ಎಂಥದಾಯ್ತು ಅಂದ್ರೆ...'

'ನೋಡಿ... ನಿಮ್ಮ ವಿವರಣೆ ನಂಗೆ ಬೇಕಾಗಿಲ್ಲ. ಇದೇ ಸುರು ಇದೇ ಕೊನೆ. ಹಾಸ್ಪಿಟಲ್‌ನ ರೂಲ್ಸ್ ಮೀರಿ ನೀವು ವರ್ತಿಸಿದ್ರೆ ನಿಮ್ಮ ಪೇಷೆಂಟನ್ನು ವಿಸಿಟಿಂಗ್ ಅವರ್ಸ್‌ನಲ್ಲಿ ನೋಡ್ಲಿಕ್ಕೆ ಯಾರನ್ನು ಸಾ ಒಳಗೆ ಬಿಡಬಾರದು ಅಂತ ನೋಟ್ ಹಾಕ್ತೇನೆ. ಯೂ ಕ್ಯಾನ್ ಗೋ ನೌ' ಅಂತ ಕಟುವಾಗಿ ಹೇಳಿದರು. ಅವ ತಲೆತಗ್ಗಿಸಿ ಅಲ್ಲಿಂದ ಹೊರಗೆ ಬಂದ. ಭಾರವಾದ ಹೆಜ್ಜೆಗಳನ್ನು ಹಾಕುತ್ತ ಐಸಿಯೂನಲ್ಲಿ ಇರುವ ಪೇಷೆಂಟುಗಳ ಸಂಬಂಧಿಕರಿಗೆ ಕಾಯೂದಕ್ಕೆ ಅಂತ ಮೀಸಲಾಗಿದ್ದ ಲಾಂಜಿಗೆ ಬಂದು ಕೂತ.

'ವಿವೇಕಾ ಯೆಂತ ಹೇಳಿದ್ರೋ ಡಾಕ್ಟರು? ಯಾವಾಗ ವಾರ್ಡಿಗೆ ಹಾಕ್ತಾರಂತೆ? ಎಂಥದು ಸಾ ತೊಂದರೆ ಇಲ್ಲ ಅಲ್ವಾ?' ಅಂತ ಕಣ್ಣಲ್ಲಿ ನೀರು ತುಂಬಿಕೊಂಡು ಅನಸೂಯಮ್ಮ ಕೇಳಿದರು.

'ಇಲ್ಲ ಅಮ್ಮಾ... ಎಂಥದು ಸಾ ತೊಂದರೆ ಇಲ್ಲ ಅಂತೆ. ಇನ್ನು ಮೂರು ನಾಕು ದಿನಗಳಲ್ಲಿ ವಾರ್ಡಿಗೆ ಹಾಕ್ತಾರಂತೆ.'